

بِسۡمِ اللهِ الرَّحۡمَنِ الرَّحِيمِ

# ಜರ್ಮನ್ ಜಲ್ಸ : ಕೆಲವು ಪ್ರಾಮುಖ್ಯ ಉಪದೇಶಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಜರ್ಮನಿಯ '**ಕಾಲ್ಸ್‌ರೂಯೆ**' ನಿಂದ **02-09-2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನ ಅನುಗ್ರಹದಿಂದ ಇಂದಿನಿಂದ ಮೂರು ದಿವಸಗಳ ಕಾಲ ಜರ್ಮನಿಯ ಅಹ್ಮದಿಯಾ ಜಮಾಅತ್ ಜಲ್ಸಾ ಸಾಲಾನಾ ಜರಗಿಸುವ ಭಾಗ್ಯ ಗಳಿಸುತ್ತಿದೆ. ಇಂದಿನ ಜುಮುಅದೊಂದಿಗೆ ಜಲ್ಸ ಸಾಲಾನ ಪ್ರಾರಂಭವಾಗುತ್ತದೆ. ಜಮಾಅತಿನ ಸದಸ್ಯರ ಸುಧಾರಣೆಗೋಸ್ಕರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಲ್ಲಾಹನ ಆಜ್ಞೆ ಪ್ರಕಾರ 125 ವರ್ಷಗಳ ಮೊದಲು ಜಲ್ಸದ ಅಸ್ತಿಭಾರ ಹಾಕಿದ್ದರು. ಮೊದಲನೆಯ ಜಲ್ಸ ಖಾದಿಯಾನ್ ಎಂಬ ಚಿಕ್ಕ ಪಟ್ಟಣದಲ್ಲಿ ಮಸ್‌ಜಿದ್‌ನ ಒಂದು ಭಾಗದಲ್ಲಿ 75 ಜನರು ಜಮಾಯಿಸಿ ತಮ್ಮಲ್ಲಿ ಪರಿಶುದ್ಧ ಬದಲಾವಣೆ ಉಂಟುಮಾಡಲು, ಲೋಕದ ಸುಧಾರಣೆ ಮಾಡಲು, ಇಸ್ಲಾಮಿನ ಸಂದೇಶವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಯಕರಾಗಿ ಲೋಕದಲ್ಲಿ ಹರಡಲು ಮಾಡಿದ ಪ್ರತಿಜ್ಞೆಯ ಫಲಸ್ವರೂಪವನ್ನು ನಾವು ಇಂದು ನೋಡುತ್ತಿದ್ದೇವೆ. ಅಲ್ಲಾಹನು ಅವರ ಕೆಲಸದಲ್ಲಿ ಮತ್ತು ಅವರ ಸಂಕಲ್ಪಗಳಲ್ಲಿ ಎಂತಹ ಅನುಗ್ರಹ ನೀಡಿದನೆಂದರೆ ಇಂದು ಜರ್ಮನಿಯಲ್ಲಿ ಅಹ್ಮದಿಯಾ ಜಮಾಅತ್, ಇಲ್ಲಿರುವ ಕಟ್ಟಡ ಸಂಕೀರ್ಣಗಳ ಪೈಕಿ ಒಂದು ದೊಡ್ಡ ಸಂಕೀರ್ಣದಲ್ಲಿ ತನ್ನ ಜಲ್ಸಾ ಸಾಲಾನ ಜರಗಿಸುತ್ತಾ ಇದೆ. ಈ ಕಟ್ಟಡ ಸಂಕೀರ್ಣವು ಬಹಳ ವಿಶಾಲವಾದ ಸ್ಥಳದಲ್ಲಿ ಹರಡಿದೆ. ಖಾದಿಯಾನ್ ಎಂಬ ಚಿಕ್ಕ ಪಟ್ಟಣದಲ್ಲಿ ಜರಗಿದ ಆ ಜಲ್ಸಕ್ಕೆ ಅಲ್ಲಾಹನು ಎಷ್ಟು ಅನುಗ್ರಹ ನೀಡಿದನೆಂದರೆ ಆ ಮಾದರಿ ಪ್ರಕಾರ ಲೋಕದಲ್ಲಿ ಎಲ್ಲೆಲ್ಲಿ ಜಮಾಅತ್ ಸ್ಥಾಪಿತವಾಗಿದೆಯೋ ಎಂದರೆ ಅಂದಾಜು ಎಲ್ಲ ದೇಶಗಳಲ್ಲಿಯೂ ಜಲ್ಸ ಸಾಲಾನ ಜರಗುತ್ತಿವೆ. ಈ ಜಲ್ಸಗಳನ್ನು ಜರಗಿಸುವುದರ ಉದ್ದೇಶಲಕ್ಷ್ಯ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ವಿವರಿಸಿದ ಪ್ರಕಾರವೇ ಆಗಿದೆ. ಆ ಉದ್ದೇಶ ಲಕ್ಷ್ಯವೇನಿತ್ತೆಂದು ನಾನು ಸಂಕ್ಷಿಪ್ತವಾಗಿ ಈಗಾಗಲೆ ಪ್ರಸ್ತಾಪಿಸಿದ್ದೇನೆ.

ನಾವು ಇಲ್ಲಿ ಈ ಉದ್ದೇಶ ಲಕ್ಷ್ಯದೊಂದಿಗೆ ಜಮಾಯಿಸಿದ್ದರೆ ನಾವು ಅಲ್ಲಾಹನ ಅನುಗ್ರಹಗಳಿಗೆ ವಾರೀಸುದಾರರಾಗುವ ಭಾಗ್ಯಶಾಲಿಗಳಾಗುವೆವು. ಯಾವುದಾದರೂ ಜಾತ್ರೆಗೆ ಹೋಗುವ ಮನೋಭಾವದಿಂದ ಯಾರಾದರೂ ಇಲ್ಲಿಗೆ ಆಗಮಿಸುವುದಾದರೆ, ಅಥವಾ ನಮ್ಮ ಪೈಕಿ ಯಾರಾದರೂ ಆಗಮಿಸಿದ್ದರೆ, ಅದು ದುರದೃಷ್ಟಕರವಾಗುವುದು. ಅಲ್ಲಾಹನು ನಮ್ಮೊಂದಿಗೆ ಒಂದು ಒಳ್ಳೆಯ ಉದ್ದೇಶಕ್ಕೋಸ್ಕರ ಜಮಾಯಿಸಲು ಹೇಳಿದನು. ನಾವು ಜಮಾಯಿಸಿದೆವು. ಆದರೆ ಒಳ್ಳೆಯ ಉದ್ದೇಶಲಕ್ಷ್ಯವನ್ನು ಗಳಿಸುವುದಕ್ಕೆ ಬದಲಾಗಿ ನಾವು ಲೌಕಿಕ ವಿಷಯಗಳಲ್ಲಿ ಮಗ್ನರಾಗುವುದಾದರೆ ಅದು ದುರದೃಷ್ಟಕರವಾಗಿದೆ. ಆದುದರಿಂದ ಇಲ್ಲಿಗೆ ಆಗಮಿಸುವ ಪ್ರತಿಯೊಬ್ಬ ಅಹ್ಮದಿ ದೃಷ್ಟಿಯಲ್ಲಿರಿಸಬೇಕಾದುದು ಏನೆಂದರೆ ಈ ಮೂರು ದಿನಗಳ ಕಾಲ ಲೌಕಿಕ ವ್ಯವಾಹಾರಗಳೊಂದಿಗೆ ಸಂಬಂಧವನ್ನು ಪೂರ್ಣವಾಗಿ ವಿಚ್ಛೇದಿಸಬೇಕು. ಅನಂತರ ಸಹ ಒಳಿತುಗಳನ್ನು ಜಾರಿಯಲ್ಲಿರಿಸುವ ಪ್ರತಿಜ್ಞೆ ಮಾಡಿ ಹಿಂದಿರುಗಬೇಕು. ಈ ದಿನಗಳಲ್ಲಿ ಫರ್ಝ್ ಮತ್ತು ನಫ್ಲ್ ಆರಾಧನೆಗಳೊಂದಿಗೆ ಝಿಕ್ರೆ ಇಲಾಹಿ ಸಹ ಮಾಡುತ್ತಾ ಇರಬೇಕು. ಝಿಕ್ರೆ ಇಲಾಹಿಯಿಂದ ಯೋಚನೆಗಳು ಪರಿಶುದ್ಧವಾಗುತ್ತವೆ ಮತ್ತು ಅಲ್ಲಾಹನ ಕಡೆಗೆ ಗಮನವಿರುತ್ತದೆ ಮತ್ತು ಮನುಷ್ಯನು ಕೆಡುಕುಗಳಿಂದ ರಕ್ಷಿಸಲ್ಪಡುತ್ತಾನೆ. ಇವು ಆರಾಧನೆಗಳ ಉದ್ದೇಶಗಳಾಗಿವೆ. ಝಿಕ್ರೆ ಇಲಾಹಿ ಕಡ್ಡಾಯ ಆರಾಧನೆಗಳ ಕಡೆಗೆ ನಮ್ಮ ಗಮನ ಹರಿಸುತ್ತಾ ಇರುತ್ತದೆ. ಆದುದರಿಂದ ಈ ವಿಷಯವನ್ನು ಪ್ರತಿಯೊಬ್ಬನು ನೆನಪಿನಲ್ಲಿಡಬೇಕು.

ಕೆಲವು ದಿನಗಳ ನಂತರ– ಇನ್‌ಶಾಅಲ್ಲಾಹ್– ಹಜ್ ಎಂಬ ಆರಾಧನೆ ನೆರವೇರಿಸಲ್ಪಡಲಿದೆ. ಹಜ್ ಮಾಡುವವರು ತಮ್ಮನ್ನು ರಕ್ಷಿಸಿಕೊಳ್ಳಬೇಕಾದ ಮೂರು ಕೆಟ್ಟ ಕೆಲಸಗಳನ್ನು ಅಲ್ಲಾಹನು ಸೂಚಿಸಿದ್ದಾನೆ. ಅವುಗಳಲ್ಲಿ ಒಂದು **ರಫಸ್** ಆಗಿದೆ. ಸಾಮಾನ್ಯವಾಗಿ ಅದನ್ನು ಲೈಂಗಿಕ ಸಂಬಂಧ ಮಾತುಗಳು ಎಂದು ಭಾಷಾಂತರಿಸಲಾಗುತ್ತಿದೆ. ಆದರೆ ಇದರಲ್ಲಿ ಕೆಟ್ಟ ಮಾತು ಆಡುವುದು, ಬೈಯ್ಯುವುದು, ಕೊಳಕು ಮಾತುಗಳನ್ನು ಮತ್ತು ಅಶ್ಲೀಲ ಕಥೆಗಳನ್ನು ಹೇಳುವುದು, ಹಾಳು ಹರಟೆ ಕೊಚ್ಚುವುದು, ಅದಕ್ಕೋಸ್ಕರ ಗುಂಪು ಸೇರುವುದು ಇವುಗಳೆಲ್ಲಾ ಅದರಲ್ಲಿ ಒಳಗೊಂಡಿವೆ. ಒಟ್ಟಿನಲ್ಲಿ ಎಲ್ಲ ರೀತಿಯ ನಿಷ್ಪ್ರಯೋಜಕ ಹರಟೆ ಮಾತುಗಳನ್ನಾಡುವುದನ್ನೂ, ಅದಕ್ಕಾಗಿ ಸಭೆ ಸೇರುವುದನ್ನೂ ನಿಷಿದ್ಧಗೊಳಿಸಲಾಗಿದೆ. ಅಲ್ಲಾಹನು ಹೇಳಿದ ಇನ್ನೊಂದು ವಿಷಯ ಹಜ್‌ನ ವೇಳೆಯಲ್ಲಿ **ಫುಸೂಖ್** ಮಾಡಬಾರದು ಎಂದು. ಎಂದರೆ ಅನುಸರಣೆಗೇಡು ತೋರಿಸಬಾರದು. ಅಲ್ಲಾಹನ ಆಜ್ಞೆಗಳನ್ನು ಪಾಲನೆ ಮಾಡಬೇಕು. ಅವುಗಳನ್ನು ಉಲ್ಲಂಘಿಸಬಾರದು. ನೀವು ಅವಲಂಬಿಸಿದ ಒಳಿತಿನ ಮಾರ್ಗವನ್ನು ಕೈಬಿಡಬಾರದು, ಕೆಡುಕಿನ ಕಡೆಗೆ ಬಾಗಬಾರದು ಎಂದಾಗಿದೆ. ಅಲ್ಲಾಹನು ಹೇಳಿದ ಇನ್ನೊಂದು ವಿಷಯ ಹಜ್‌ನ ದಿನಗಳಲ್ಲಿ **ಜಿದಾಲ್** ಮಾಡಬಾರದು ಎಂದಾಗಿದೆ. ಎಂದರೆ ಎಲ್ಲ ವಿಧಗಳ ಜಗಳಗಳಿಂದಲೂ ಕಲಹಗಳಿಂದಲೂ ಪೂರ್ಣವಾಗಿ ತಮ್ಮನ್ನು ರಕ್ಷಿಸಿಕೊಳ್ಳಬೇಕು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ಸಂದರ್ಭದಲ್ಲಿ ಹೀಗೆ ಹೇಳಿದ್ದರು: ನಮ್ಮ ಜಲ್ಸಗಳಲ್ಲಿಯೂ ಇಂತಹ ಮನೋಭಾವವನ್ನು ಹೊಂದಿ ಜನರು ಆಗಮಿಸುವುದಾದರೆ, ಎಂದರೆ ಹಜ್‌ಕಾಲದಲ್ಲಿ ಕೆಡುಕುಗಳಿಂದ ರಕ್ಷಿಸಿಕೊಳ್ಳಲು ಅಲ್ಲಾಹನು ನೀಡಿದ ಆಜ್ಞೆಗಳನ್ನು ಪಾಲಿಸುವುದಾದರೆ, ನಮ್ಮ ಜಮಾಅತಿನ ಜನರಲ್ಲಿ ಅಸಾಧಾರಣವಾದ ಸುಧಾರಣೆ ಉಂಟಾಗುವುದು. ನಿಶ್ಚಯವಾಗಿಯೂ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಜಮಾಅತಿನ ಜನರ ಸುಧಾರಣೆಗೆ ಬಹಳ ಅರ್ಥವತ್ತಾಗಿ, ಸೈದ್ಧಾಂತಿಕವಾಗಿ ಈ ವಿಷಯಗಳನ್ನು ವಿವರಿಸಿದ್ದಾರೆ. ಜಲ್ಸದ ಸ್ಥಾನ ಹಜ್‌ನ ಸ್ಥಾನದ ಹಾಗೆಯೇ ಇದೆ ಎಂದು ನಾವು ಹೇಳುವುದಿಲ್ಲ. ಜಲ್ಸ ಒಂದು ಆರಾಧನೆಯಲ್ಲ. ಆದರೆ ಖಂಡಿತವಾಗಿಯೂ ಅದೊಂದು ಟ್ರೈನಿಂಗ್ ಕ್ಯಾಂಪ್ ಆಗಿದೆ. ಅದನ್ನು ಆಧ್ಯಾತ್ಮಿಕ ಅಭಿವೃದ್ಧಿಗೋಸ್ಕರ ನಡೆಸಲಾಗುತ್ತಿದೆ. ಇಂತಹ ಸ್ಥಳದಲ್ಲಿ ನಾವು ಕೆಟ್ಟ ಮಾತುಗಳನ್ನು, ಬೈಗಳನ್ನು, ನಿಷ್ಪ್ರಯೋಜಕ ಚರ್ಚೆಗಳನ್ನು, ನಿರರ್ಥಕ ಕಥೆಗಳನ್ನು ಹೇಳುವ ಕೆಲಸ ಮಾಡುವುದಾದರೆ ಜಲ್ಸದ ಉದ್ದೇಶಲಕ್ಷ್ಯ ಈಡೇರದು. ಆದುದರಿಂದ ನಾವು ಜಲ್ಸದ ಕಾಲದಲ್ಲಿ

ಇಂತಹವುಗಳಿಂದ ನಮ್ಮನ್ನು ರಕ್ಷಿಸಿಕೊಳ್ಳಬೇಕು. ಹಾಗೆ ನಾವು ನಿರರ್ಥಕ ಮಾತುಗಳಿಂದ, ನಿರರ್ಥಕ ಚರ್ಚೆಗಳಿಂದ ನಮ್ಮನ್ನು ರಕ್ಷಿಸಿಕೊಳ್ಳುವುದಾದರೆ ನಿಶ್ಚಯವಾಗಿಯೂ ಶಾಂತ, ನೆಮ್ಮದಿದಾಯಕ ಮತ್ತು ಒಳಿತನ್ನು ಚೆಲ್ಲುವ ಪರಿಸರವು ಸೃಷ್ಟಿಸಲ್ಪಡುವುದು. ಮತ್ತು ಜಲ್ಸದ ಉದ್ದೇಶಲಕ್ಷ್ಯ ಈಡೇರುವುದು. **ಫುಸೂಖ್** ಎಂದರೆ ಅಲ್ಲಾಹನ ಆಜ್ಞೆಗಳನ್ನು ಉಲ್ಲಂಘಿಸುವ ಪಾಪದಿಂದ ನಾವು ನಮ್ಮನ್ನು ರಕ್ಷಿಸಿಕೊಳ್ಳಬೇಕು. ನಾವು ಸಂಪೂರ್ಣವಾಗಿ ಧಾರ್ಮಿಕ ಉದ್ದೇಶಕ್ಕೋಸ್ಕರ ಇಲ್ಲಿಗೆ ಆಗಮಿಸಿರುವಾಗ ನಾವು ಅಲ್ಲಾಹನ ಅನುಸರಣೆಯ ನೊಗವನ್ನು ನಮ್ಮ ಕೊರಳಲ್ಲಿ ಯಾವಾಗಲೂ ಇರಿಸಿಕೊಳ್ಳಬೇಕು.

ಸಂಕ್ಷಿಪ್ತವಾಗಿ ಹೇಳುವುದಾದರೆ ಪವಿತ್ರ ಖುರ್‌ಆನಿನ ಉಪದೇಶಗಳನ್ನು ನಮ್ಮ ಮೇಲೆ ಜಾರಿಗೊಳಿಸಿ ಅಲ್ಲಾಹನನ್ನು ಆರಾಧಿಸುವ ಹಕ್ಕನ್ನು ಈಡೇರಿಸಬೇಕು. ಮತ್ತು ಇತರ ಆಜ್ಞೆಗಳನ್ನೂ ಪಾಲಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ವಿವರಿಸಿದ ಜಲ್ಸದ ಉದ್ದೇಶ ಲಕ್ಷ್ಯಗಳು ವಾಸ್ತವಿಕವಾಗಿ ಮೇಲೆ ವಿವರಿಸಿದ ಮೂರು ವಿಷಯಗಳ ಸುತ್ತಲೂ ತಿರುಗುತ್ತಿವೆ. ಅವರು ಹೇಳಿದ ಜಲ್ಸದ ಉದ್ದೇಶಗಳು ಇವುಗಳಾಗಿವೆ: ಜಲ್ಸದಲ್ಲಿ ಆತ್ಮ ಪರಿಶುದ್ಧಿಗೆ ಸಂದರ್ಭ ಲಭಿಸುವಂತಾಗಬೇಕು. ನಿರರ್ಥಕ ವಿಷಯಗಳಿಂದ ರಕ್ಷಿಸಿಕೊಳ್ಳಬೇಕು. ಅಲ್ಲಾಹನ ಕಡೆಗೆ ಗಮನ ಹರಿಯಬೇಕು. ಅಲ್ಲಾಹನ ಆಜ್ಞೆಗಳನ್ನು ಪೂರ್ಣವಾಗಿ ಅನುಸರಿಸುವ ಬಗ್ಗೆ ವಿಶಿಷ್ಟ ಗಮನ ಹರಿಯುವಂತಾಗಬೇಕು. ತಮ್ಮ ಸಹೋದರರೊಂದಿಗೆ ವಿಶಿಷ್ಟ ಭ್ರಾತೃ ಸಂಬಂಧ ಸ್ಥಾಪಿಸಬೇಕು. ಎಲ್ಲ ರೀತಿಯ ಸ್ವಾರ್ಥ ಹಿತಾಸಕ್ತಿ ಮತ್ತು ಜಗಳಗಳನ್ನು ಕೊನೆಗೊಳಿಸಬೇಕು.

ಆದುದರಿಂದ ಜಲ್ಸದಲ್ಲಿ ಬಂದು ಸೇರುವ ಪ್ರತಿಯೊಬ್ಬನೂ ನೆನಪಿಡಬೇಕಾದುದೇನೆಂದರೆ ಈ ದಿನಗಳಲ್ಲಿ ಪ್ರತಿಯೊಂದು ಚಿಕ್ಕಪುಟ್ಟ ವಿಷಯಗಳಿಗೆ ಸಂಬಂಧಿಸಿ ತನ್ನ ಆತ್ಮ ಪರಿಶುದ್ಧಿಯ ಕಡೆಗೆ ಗಮನ ಹರಿಸಬೇಕು. ನಿಮ್ಮ ಸಮಯವನ್ನು ಅಲ್ಲಿ ಇಲ್ಲಿ ತಿರುಗಾಡಿ ಕಳೆಯುವುದಕ್ಕೆ ಬದಲಾಗಿ ಜಲ್ಸದಲ್ಲಿ ಭಾಗವಹಿಸುವ ಉದ್ದೇಶವನ್ನು ಈಡೇರಿಸಲು ಜಲ್ಸದ ಎಲ್ಲ ಕಾರ್ಯಕ್ರಮಗಳನ್ನು ಆಲಿಸಬೇಕು. ಜಲ್ಸದ ವಾಸ್ತವಿಕ ಅನುಗ್ರಹ ಗಳಿಸಲು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪ್ರಾರ್ಥನೆಗಳಿಗೆ ವಾರೀಸುದಾರರಾಗಲು ಹಿಂದಿನ ಜಗಳಗಳನ್ನು ಒಬ್ಬರಿನ್ನೊಬ್ಬರಿಗಿಂತ ಮುಂದಾಗಿ ರಾಜಿ ಮಾಡಿಸಿ ಜಗಳಗಳನ್ನು ಕೊನೆಗೊಳಿಸಬೇಕು. ತಮ್ಮ ಅಹಂಭಾವಗಳನ್ನು ಕೊನೆಗೊಳಿಸಬೇಕು.

ಅಲ್ಲಾಹನು ಹೀಗೆ ಹೇಳಿದ್ದಾನೆ: **ಖದ್ ಅಫ್‌ಲಹಲ್ ಮೂಮಿನೂನ್ ಅಲ್ಲಝೀನ ಹುಮ್ ಫೀ ಸಲಾತಿಹಿಮ್ ಖಾಶಿಊನ್ ವಲ್ಲಝೀನ ಹುಮ್ ಅನಿಲ್ಲಗ್‌ವಿ ಮುಅ್‌ರಿಝೂನ್.** ನಿಶ್ಚಯವಾಗಿಯೂ ಆ ಸತ್ಯ ವಿಶ್ವಾಸಿಗಳು ಜಯಶಾಲಿಗಳಾದರು. ಅವರು ನಮಾಝ್‌ಗಳಲ್ಲಿ ಭಯ ವಿಹ್ವಲರಾಗಿರುತ್ತಾರೆ. ಅವರು ಲಘುವಾದ ವಿಷಯಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುತ್ತಾರೆ.

ಅಲ್ಲಾಹನನ್ನು ಪರಿಪೂರ್ಣವಾಗಿ ಅನುಸರಿಸುವವರಾಗಿ ನಮಾಝ್‌ಗಳನ್ನು ಅನುಷ್ಠಿಸಿರಿ. ಅನೇಕ ಜನರು ನನಗೆ ಹೀಗೆ ಬರೆದಿದ್ದಾರೆ. ಜಲ್ಸದಲ್ಲಿ ಭಯಭಕ್ತಿ ಭರಿತ ನಮಾಝ್‌ಗಳನ್ನು ಅನುಷ್ಠಿಸುವಾಗ ಬಹಳ ಆತ್ಮ ಸಂತೃಪ್ತಿ ಉಂಟಾಗುತ್ತದೆ. ಇಂತಹ ಆತ್ಮ ಸಂತೃಪ್ತಿ ಗಳಿಸುವುದು ಪ್ರತಿಯೊಬ್ಬನ ಪ್ರಯತ್ನವಾಗಬೇಕು. ಹಾಗೆ ಮಾಡಿದರೆ ಜಯಶಾಲಿಗಳಾಗುವ ಸತ್ಯವಿಶ್ವಾಸಿಗಳಲ್ಲಿ ಸೇರುವವರಾಗುವಿರಿ. ಅಲ್ಲಾಹನು ಜಯಶಾಲಿಯಾಗಲು ವಿವಿಧ ಮಾರ್ಗಗಳನ್ನು ತೋರಿಸಿದ್ದಾನೆ. ಆರಾಧನೆಯ ನಂತರ ಎರಡನೆಯ ಮಾರ್ಗ ಲಘು ವಿಷಯಗಳಿಂದ ವಿಮುಖರಾಗುವುದಾಗಿದೆ. ಈ ವಿಷಯದ ಕಡೆಗೆ ಸಹ ಪ್ರತಿಯೊಬ್ಬ ಅಹ್ಮದಿ ಜಲ್ಸದ ದಿನಗಳಲ್ಲಿಯೂ ಅನಂತರ ಸಹ ವಿಶಿಷ್ಟ ಗಮನ ಹರಿಸಬೇಕು. ಪ್ರತಿಯೊಂದು ರೀತಿಯ ಸುಳ್ಳು, ಪ್ರತಿಯೊಂದು ರೀತಿಯ ಪಾಪಕೃತ್ಯ, ಜೂಜು, ಹರಟೆ, ದೋಷಾರೋಪ ಮೊದಲಾದುವುಗಳಿಂದ ರಕ್ಷಿಸಿಕೊಳ್ಳಬೇಕು. ಈ ಕಾಲಘಟ್ಟದ ಇಮಾಮರನ್ನು ನಂಬುವ ಭಾಗ್ಯ ನಮಗೆ ದಯಪಾಲಿಸಿದುದಕ್ಕೋಸ್ಕರ ನಾವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕು. ಅವರು ಈ ಎಲ್ಲ ಲಘು ಕೃತ್ಯಗಳಿಂದ ನಮ್ಮನ್ನು ರಕ್ಷಿಸಿಕೊಳ್ಳಬೇಕೆಂದು ಪದೇ ಪದೇ ನಮ್ಮ ಗಮನ ಸೆಳೆದಿರುವರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಇಂತಹ ನಿರುಪಯುಕ್ತ ಕೃತ್ಯಗಳ ಬಗ್ಗೆ ಹೀಗೆ ವಿವರಿಸಿರುವರು: ಲಘು ಕೆಲಸಗಳಿಂದ, ಲಘು ವಿಷಯಗಳಿಂದ, ಲಘು ಚಲನೆಗಳಿಂದ, ಲಘು ಸಭೆಗಳಿಂದ, ಲಘು ಸಹವಾಸದಿಂದ, ಲಘು ಸಂಬಂಧಗಳಿಂದ, ಲಘು ಉದ್ವೇಗಗಳಿಂದ ದೂರ ಸರಿಯುವ ಸತ್ಯವಿಶ್ವಾಸಿಗಳೇ ಯಶಸ್ಸು ಗಳಿಸಿದವರಾಗಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಇಂತಹ ಎಲ್ಲ ಲಘು ವಿಷಯಗಳ ಬಗ್ಗೆಯೂ ಸೂಚನೆ ನೀಡಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿವರಿಸಿದ ಈ ಲಘು ಕೆಲಸಗಳು ಒಂದನ್ನೊಂದು ಜೋಡಿಸಿದೆ. ಒಂದು ಲಘು ಕೆಲಸ ಇನ್ನೊಂದು ಲಘು ಕೆಲಸದ ಕಡೆಗೆ ಒಯ್ಯುತ್ತದೆ. ಲಘು ಕೆಲಸಗಳು, ಲಘು ಮಾತುಗಳು ಲಘು ಚಲನೆಗಳು ಸಂಭವಿಸುವುದು ಲಘು ಸಭೆಗಳಲ್ಲಿ ಕುಳಿತುಕೊಳ್ಳುವ ಜನರಿಂದಾಗಿದೆ. ಆದರೆ ಜಲ್ಸದಲ್ಲಿ ಭಾಗವಹಿಸುವವರಲ್ಲಿ ಎಂತಹ ಪರಿಶುದ್ಧ ಬದಲಾವಣೆ ಉಂಟಾಗಬೇಕೆಂದರೆ ಕೇವಲ ಜಲ್ಸದ ದಿನಗಳಲ್ಲಿ ಮಾತ್ರವಲ್ಲ ಅನಂತರ ಸಹ ನಮ್ಮ ಜೊತೆ ಕುಳಿತುಕೊಳ್ಳುವವರು ಯಾವಾಗಲೂ ಲಘು ಕಾರ್ಯಗಳಿಂದ ತಮ್ಮನ್ನು ದೂರ ಸರಿಸುವವರಾಗಬೇಕು. ಎಂತಹ ಸಭೆಗಳು ಇರಬೇಕೆಂದರೆ ಅದರಲ್ಲಿ ಕುಳಿತುಕೊಳ್ಳುವವರು ಎಂದೂ ತಿರಸ್ಕರಿಸಲ್ಪಡುವವರಾಗಬಾರದು. ಅವರು ಅಲ್ಲಾಹನ ಅಂಗೀಕಾರ ಪಡೆಯುವ ಜನರಾಗಬೇಕು. ನಮ್ಮ ಸ್ವಭಾವಗುಣಗಳು ಉನ್ನತ ಮಟ್ಟದ್ದಾಗಬೇಕು. ನಮ್ಮ ಸತ್ಯಸಂಧತೆ ಉನ್ನತ ಮಟ್ಟದಲ್ಲಿರಬೇಕು. ಅನ್ಯರು ಸಹ ನಮ್ಮ ಉನ್ನತ ಮಟ್ಟದ ಗುಣ ನಡತೆಗಳನ್ನು ಕಂಡು ತಮ್ಮಲ್ಲಿ ಉತ್ತಮ ಪರಿಣಾಮ ಉಂಟುಮಾಡುವ ರೀತಿಯಲ್ಲಿರಬೇಕು.

ಒಂದು ಸ್ಥಳದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮಗೆ ಉಪದೇಶ ನೀಡುತ್ತಾ ಹೀಗೆ ಹೇಳಿದರು: ನಮ್ಮ ಜಮಾಅತಿನ ಜನರು ನೆನಪಿಡಬೇಕಾದ ಮತ್ತೊಂದು ಮುಖ್ಯ ವಿಷಯವೇನೆಂದರೆ ಅವರು ತಮ್ಮ ನಾಲಗೆಗಳನ್ನು ನಿರರ್ಥಕ ಮಾತುಗಳಿಂದ ರಕ್ಷಿಸಬೇಕು. ನಾಲಗೆ ಮನುಷ್ಯನ ಅಸ್ತಿತ್ವದ ಹೊಸ್ತಿಲಾಗಿದೆ. ನಾಲಗೆಯನ್ನು ಶುದ್ಧವಾಗಿರಿಸಿದರೆ ಅಲ್ಲಾಹನು ಮನುಷ್ಯನ ಅಸ್ತಿತ್ವದ ಹೊಸ್ತಿಲಿಗೆ ಬರುತ್ತಾನೆ. ಅಲ್ಲಾಹನು ನಮ್ಮ ಮನೆ ಬಾಗಿಲಿಗೆ ಬಂದರೆ ಒಳಗೆ ಬರುವ ಬಗ್ಗೆ ಆಶ್ಚರ್ಯಪಡುವ ವಿಷಯವಲ್ಲ. ಇಲ್ಲಿ ಮನೆಯ ಮುಂಬಾಗದ ಬಾಗಿಲು ಅಥವಾ ಮೈನ್ ಗೇಟನ್ನು ಉದ್ದೇಶಿಸಲಾಗಿದೆ. ಅಲ್ಲಾಹನು ನಿಮ್ಮ ಮನೆಯ ಮುಂಬಾಗಿಲ ಸಮೀಪ ಬಂದರೆ ಅವನು ಒಳಗೆ ಪ್ರವೇಶಿಸುವುದು ಅಸಂಭವ್ಯವಲ್ಲ. ಅವನು ಒಳಗೆ ಬರುವ ಬಗ್ಗೆ ಆಶ್ಚರ್ಯ ಪಡಬೇಕಾಗಿಲ್ಲ.

ಒಟ್ಟಿನಲ್ಲಿ, ಅಲ್ಲಾಹನು ಲಘು ವಿಷಯಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುವವರನ್ನು ಒಳ್ಳೆಯ ಸ್ವಭಾವ ತೋರಿಸುವವರನ್ನು ಮತ್ತು ಮೃದು ಭಾಷೆ ಬಳಸುವವರನ್ನು ಸಮೀಪಿಸುತ್ತಾನೆ. ಅವನು ಎಷ್ಟು ಸಮೀಪವಾಗುತ್ತಾನೆಂದರೆ, ಒಳಿತನ್ನು ಸದಾಕಾಲ ಮಾಡುತ್ತಾ ಇದ್ದರೆ ಅಂತಹ ಜನರಿಗೆ ತನ್ನ ಅನುಗ್ರಹ ಸುರಿಯುತ್ತಾ ಅವರನ್ನು ತನ್ನವರನ್ನಾಗಿ ಮಾಡಿಕೊಳ್ಳುತ್ತಾನೆ. ಅಲ್ಲಾಹನು ಮನೆಗೆ ಬರುವುದರ ಅರ್ಥವೇನೆಂದರೆ ಅಲ್ಲಾಹನು ದಾಸನನ್ನು ತನ್ನವನನ್ನಾಗಿ ಮಾಡುತ್ತಾನೆ. ಅಲ್ಲಾಹನು ಒಬ್ಬನನ್ನು ತನ್ನವನನ್ನಾಗಿ ಮಾಡುವಾಗ ಮನುಷ್ಯನಿಗೆ ಆರಾಧನೆಯಲ್ಲಿ ಮತ್ತು ಒಳಿತುಗಳಲ್ಲಿ ಅಭಿವೃದ್ಧಿ ಗಳಿಸುವ ಭಾಗ್ಯ ಲಭಿಸುತ್ತಾ ಇರುತ್ತದೆ. ಒಳಿತುಗಳಿಂದ ಒಳಿತುಗಳು ಹುಟ್ಟುತ್ತವೆ. ಅಲ್ಲಾಹನ ಸಾಮೀಪ್ಯ ಗಳಿಸುವ ಮಾರ್ಗಗಳು ತೆರೆಯುತ್ತಾ ಇರುತ್ತವೆ. ನಾನು ಹಿಂದೆ ಹೇಳಿದ ಹಾಗೆ ನಾವು ಇಲ್ಲಿಗೆ ಆಗಮಿಸಿರುವುದು ಅಲ್ಲಾಹನ ಸಂಪ್ರೀತಿ ಗಳಿಸಲು, ನಮ್ಮಲ್ಲಿ ಪರಿಶುದ್ಧ ಬದಲಾವಣೆ ಉಂಟುಮಾಡಲು ಆಗಿದೆ. ನಮ್ಮ ಉದ್ದೇಶಲಕ್ಷ್ಯ ಹೀಗಿರುವಾಗ ನಾವು ಭಾಷಣಗಳನ್ನು ಆಲಿಸಿ ಕೇವಲ ಜ್ಞಾನ ಸಂಪಾದಿಸುವುದರಿಂದ ಈ ಉದ್ದೇಶ ಗಳಿಸಲು ಸಾಧ್ಯವಿಲ್ಲ. ನಾವು ನಮ್ಮಲ್ಲಿ ಪರಿಶುದ್ಧ ಬದಲಾವಣೆ ಉಂಟುಮಾಡಬೇಕು. ನಾವು ಆರಾಧನೆ ಮಾಡುತ್ತಾ ಅಲ್ಲಾಹನ ಹಕ್ಕುಗಳನ್ನು ಈಡೇರಿಸಬೇಕು. ಅದೇ ರೀತಿ ನಾವು ಉನ್ನತ ಸ್ವಭಾವಗುಣಗಳನ್ನು ಹೊಂದಿ ಲಘು ವಿಷಯಗಳಿಂದ ದೂರ ಸರಿದು ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಸಹ ಈಡೇರಿಸಬೇಕು. ಈ ವಿಷಯಗಳ ಕಡೆಗೆ ವಿಶಿಷ್ಟವಾಗಿ ಗಮನ ಹರಿಸಬೇಕಾದುದು ಅತೀ ಅಗತ್ಯವಾಗಿದೆ. ಅಲ್ಲಾಹನು ನಮಗೆ ಅನುಗ್ರಹ ನೀಡಿ ನಮ್ಮ ತಪ್ಪುಗಳನ್ನು ಮರೆ ಮಾಡಿರುವನು. ನಮ್ಮ ತಪ್ಪುಗಳು ಅನ್ಯರ ಮುಂದೆ ಕಾಣಿಸದಂತೆ ಮಾಡಿರುವನು. ನಮ್ಮಲ್ಲಿ ಪ್ರತಿಯೊಬ್ಬ ತನ್ನನ್ನು ಪರಿಶೋಧಿಸಿದರೆ ನಮ್ಮಲ್ಲಿ ಎಷ್ಟು ತಪ್ಪುಗಳು ಮತ್ತು ಬಲಹೀನತೆಗಳಿವೆ ಎಂದು ತಿಳಿಯುವುದು. ಈ ಬಲಹೀನತೆಗಳು ನಮ್ಮ ಜಮಾಅತನ್ನು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅಪಕೀರ್ತಿಗೆ ಗುರಿಪಡಿಸುವವುಗಳಾಗಬಹುದು. ಇದೇ ಕಾರಣದಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದಾರೆ: ''ನಮಗೆ ಸೇರಿದವರೆಂದು ಹೇಳಿಕೊಂಡು ನಮ್ಮನ್ನು ಅಪಕೀರ್ತಿಗೆ ಗುರಿಪಡಿಸಬೇಡಿರಿ.''

ನಮ್ಮ ಆರಾಧನೆಗಳ ಮಟ್ಟ ಉತ್ತಮವಾಗದಿದ್ದರೆ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅಪಕೀರ್ತಿಗೆ ಗುರಿಪಡಿಸುವ ಜನರಾಗುವೆವು. ನಮ್ಮ ಸ್ವಭಾವಗುಣಗಳು ಚೆನ್ನಾಗಿರದಿದ್ದರೆ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅಪಕೀರ್ತಿಗೆ ಗುರಿಪಡಿಸುವವರಾಗುವೆವು. ನಾವು ಲಘು ಕೃತ್ಯಗಳನ್ನು ಮಾಡುವವರಾಗಿದ್ದರೆ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅಪಕೀರ್ತಿಗೆ ಗುರಿಪಡಿಸುವವರಾಗುವೆವು. ಆದುದರಿಂದ ಅಹ್ಮದಿಯರಾದ ನಮ್ಮ ಮೇಲೆ ಬಹಳ ದೊಡ್ಡ ಹೊಣೆಗಾರಿಕೆ ಇದೆ. ನಾವು ನಮ್ಮನ್ನು ಪರಿಶೋಧಿಸುವ ಆವಶ್ಯಕತೆ ಇದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಒಂದು ಸಂದರ್ಭದಲ್ಲಿ ಉಪದೇಶಿಸುತ್ತಾ ಹೀಗೆ ಹೇಳಿದರು: ತನ್ನ ವಿಶ್ವಾಸವನ್ನು ಸ್ಥಿರವಾಗಿರಿಸಲು ಇಚ್ಛಿಸುವವನು ಸತ್ಕರ್ಮ ಮಾಡುವುದರಲ್ಲಿ ಅಭಿವೃದ್ಧಿ ಹೊಂದುತ್ತಾ ಇರಬೇಕು.

ಆದುದರಿಂದ ಈ ದಿನಗಳಲ್ಲಿ ಮತ್ತು ಯಾವಾಗಲೂ ನಿಮ್ಮ ನಮಾಝ್‌ಗಳಲ್ಲಿ ಹೃದ್ಯತೆ ಉಂಟುಮಾಡಲು ಪ್ರಯತ್ನಿಸಬೇಕು. ಆ ಮೂಲಕ ಅಲ್ಲಾಹನೊಂದಿಗೆ ನಮ್ಮ ಸಂಬಂಧ ಬಲಿಷ್ಠವಾಗಬೇಕು. ಜಲ್ಸದಲ್ಲಿ ಭಾಗವಹಿಸುವ ವಾಸ್ತವಿಕ ಉದ್ದೇಶವೇನೆಂದರೆ ನಾವು ಆಧ್ಯಾತ್ಮಿಕವಾಗಿ ಅಭಿವೃದ್ಧಿ ಹೊಂದಬೇಕು. ಪರಸ್ಪರ ಒಳ್ಳೆಯ ಸಂಬಂಧ ಸ್ಥಾಪಿಸುವ ಮತ್ತು ಒಬ್ಬರಿನ್ನೊಬ್ಬರ ಭಾವನೆಗಳ ಕಡೆಗೆ ಗಮನ ಹರಿಸುವವರಾಗಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನೀವು ವಾತ್ಸಲ್ಯ ಭರಿತರಾಗಿ ನಿಮ್ಮ ಮಕ್ಕಳೊಂದಿಗೆ ವರ್ತಿಸುವ ರೀತಿಯಲ್ಲಿಯೇ ನೀವು ಪರಸ್ಪರ ಸಹೋದರರೊಂದಿಗೆ ವರ್ತಿಸಿರಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳಿದರು: ''ಯಾರ ಸ್ವಭಾವಗುಣಗಳು ಉತ್ತಮವಾಗಿಲ್ಲವೋ ನನಗೆ ಅವನ ವಿಶ್ವಾಸದ ಬಗ್ಗೆ ಅಪಾಯ ಕಾಣುತ್ತದೆ. ಏಕೆಂದರೆ ಅವನಲ್ಲಿ ದುರಹಂಕಾರದ ಒಂದು ಶಾಖೆಯಿದೆ.

''ದುರಹಂಕಾರಿಯಾದವನು ಅನ್ಯರ ಬಗ್ಗೆ ವಾಸ್ತವಿಕವಾದ ಸಹಾನುಭೂತಿ ಹೊಂದಲು ಸಾಧ್ಯವಿಲ್ಲ. ನೀವು ನಿಮ್ಮ ಸಹಾನುಭೂತಿಯನ್ನು ಕೇವಲ ಮುಸ್ಲಿಮರಿಗೆ ಸೀಮಿತಗೊಳಿಸಬೇಡಿರಿ. ಪ್ರತಿಯೊಬ್ಬ ಮನುಷ್ಯನೊಂದಿಗೆ, ಅವನು ಮುಸ್ಲಿಮನಾದರೂ ಮುಸ್ಲಿಮೇತರನಾದರೂ ಪರಸ್ಪರ ಸಹಾನುಭೂತಿ ಹೊಂದಿರಿ. ಅಲ್ಲಾಹನು ಎಲ್ಲ ಜನರ ರಬ್ಬ್ (ಪರಿಪಾಲಕ) ಆಗಿರುವನು. ಅವನು ಕೇವಲ ಮುಸ್ಲಿಮರ ರಬ್ಬ್(ಪರಿಪಾಲಕ) ಅಲ್ಲ. ಆದರೆ ಮುಸ್ಲಿಮರೊಂದಿಗೆ ವಿಶಿಷ್ಟವಾಗಿ ಸಹಾನುಭೂತಿಯಿಂದ ವರ್ತಿಸಿರಿ'' ಈ ಉಪದೇಶಗಳು ನಮ್ಮಲ್ಲಿ ಆಧ್ಯಾತ್ಮಿಕ ಪರಿವರ್ತನೆ ಉಂಟು ಮಾಡುವವುಗಳಾಗಿವೆ. ನಾವು ಜಲ್ಸದಿಂದ ವಾಸ್ತವಿಕ ಅನುಗ್ರಹ ಗಳಿಸುವವರನ್ನಾಗಿ ಅಲ್ಲಾಹನು ನಮ್ಮನ್ನು ಮಾಡಲಿ. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪ್ರಾರ್ಥನೆಗಳ ವಾರೀಸುದಾರರಾಗುವಂತೆ ಅಲ್ಲಾಹನು ಮಾಡಲಿ — ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*at karlsruhe, Germany on 02-09-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email*****:** *khutuba.kannada@gmail.com*

**You can find all the Sermons archived at**: www.alislam.org/friday-sermon